*

**ಓಎಸ್ ನಂಃ 91/2014**

**ಡಿಡಬ್ಲ್ಯೂ : 1**

**ಸಾಕ್ಷಿಗೆ ದಿನಾಂಕ 02-06-2026 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು**

ಪಾಟೀ ಸವಾಲುಃ ವಾದಿ ಪರ ಶ್ರೀಮತಿ ಎಮ್.ವಿ.ಎಲ್. ವಕೀಲರಿಂದ

ನನ್ನ ತಾಯಿ ಅಮೀನಾ ಬಿ 2018ರಲ್ಲಿ ತೀರಿಕೊಂಡಿರುತ್ತಾರೆ. ದಾವಾ ಆಸ್ತಿಯು ನನ್ನ ಹೆಂಡತಿಯ ಮತ್ತು ಆಕೆಯ ನೆಗಣಿಗಳ ಹೆಸರಿಗೆ ನನ್ನ ತಾಯಿ ಜೀವಂತ ಇದ್ದಾಗಲೇ ಆಗಿರುತ್ತದೆ. ನನ್ನ ತಾಯಿ ನನ್ನ ಹೆಂಡತಿ ಮತ್ತು ಆಕೆಯ ನೆಗಣಿಗಳ ಹೆಸರಿಗೆ ಯಾವ ರೀತಿ ದಾವಾ ಆಸ್ತಿಯನ್ನು ನೀಡಿದ್ದಾರೆ ಎಂದು ಕೇಳಿದಾಗ ಸಾಕ್ಷಿಯು ವಕೀಲರ ಮುಖಾಂತರ ಒಂದು ಕಾಗದ ಪತ್ರವನ್ನು ತಯಾರಿಸಿ ಅಮಿನಾ ಬಿ.ಯವರು ದಾವಾ ಆಸ್ತಿಯನ್ನು ನನ್ನ ಹೆಂಡತಿಗೆ ಮತ್ತು ಆಕೆಯ ನೆಗಣಿಗಳಿಗೆ ನೀಡಿದ್ದಾರೆಂದು ಹೇಳಿ ಸದರಿ ದಾಖಲೆಯು ಯಾವ ದಾಖಲೆ ಆಗಿತ್ತು ಎಂದು ನನಗೆ ನಿಖರವಾಗಿ ಹೇಳಲು ಬರುವುದಿಲ್ಲ ಎಂದು ನುಡಿಯುತ್ತಾರೆ. ನನ್ನ ತಾಯಿ ಅಮಿನಾ ಬಿ. ಜೀವಂತ ಇದ್ದಾಗ ಆಕೆಯ ಪರವಾಗಿ ಆಕೆಯ ತಮ್ಮನಾದ ಶೇಖ್ ನಬಿ ಪ್ರಕರಣವನ್ನು ನಡೆಸುತ್ತಿದ್ದ. ವಾದಿ ಅಮಿನಾ ಬಿ.ಯವರ ಮತ್ತೊಬ್ಬ ತಮ್ಮ ಎಂದರೆ ಸರಿ.

ದಾವಾ ಆಸ್ತಿಯ ಮೂಲ ದಾಖಲೆಗಳು ವಾದಿಯ ಬಳಿ ಇವೆ. ವಾದಿಯು ದಾವಾ ಆಸ್ತಿಯನ್ನು ನಾನು ಉಳುಮೆ ಮಾಡುತ್ತೇನೆಂದು ಅಮಿನಾ ಬಿ. ಗೆ ಹೇಳಿ ಅವರಿಂದ ಸದರಿ ದಾವಾ ಆಸ್ತಿಯ ಮೂಲ ದಾಖಲೆಗಳನ್ನು ಪಡೆದಿದ್ದ ಎಂದು ನುಡಿಯುತ್ತಾರೆ. 2013ರಲ್ಲಿ ಶೇಖ್ ನಬಿ ಈತ ಅಮಿನಾ ಬಿ. ಅವರಿಂದ ಒಟ್ಟು ಮುಕ್ತಿಯಾರ್ ಪತ್ರವನ್ನು ಪಡೆದು ಅಮಿನಾ ಬಿ. ಯವರಿಗೆ ಹೇಳದೆ ಮತ್ತು ಆಕೆಯ ಒಪ್ಪಿ ಗೆ ಇಲ್ಲದೆ ದಾವಾ ಆಸ್ತಿಯನ್ನು ಪ್ರತಿವಾದಿಯರ ಹೆಂಡತಿಯರಿಗೆ ಅಕ್ರಮವಾಗಿ ಮ್ಯುಟೇಷನ್ ಮಾಡಿ ಅವರ ಹೆಸರುಗಳನ್ನು ಕಂದಾಯ ದಾಖಲೆಗಳಲ್ಲಿ ಸೇರಿಸಿದ ಎಂದರೆ ಸರಿಯಲ್ಲ.

ದಿಃ 08.04.2000ದಂದು ಅಮಿನಾ ಬಿ.ಯವರು ಮಕ್ಕಳ ಮದುವೆಗಾಗಿ ಹಣದ ಅವಶ್ಯಕತೆ ಇದ್ದ ಕಾರಣ ವಾದಿಗೆ ದಾವಾ ಆಸ್ತಿಯನ್ನು ಮಾರಾಟ ಮಾಡಬೇಕೆಂದು ಒಂದು ಕರಾರು ಪತ್ರ ಮಾಡಿಕೊಂಡು ರೂ.1,30,000/- ಹಣ ಮುಂಗಡವಾಗಿ ಪಡೆದಿದ್ದರು ಎಂದರೆ

ಸರಿಯಲ್ಲ. ಸಾಕ್ಷಿಗೆ ಈಗ ನಿಪಿ-3ರನ್ನು ತೋರಿಸಲಾಗಿ ಅದರಲ್ಲಿರುವ ಅನ್ವರ್ ಉಸ್ಮಾನ್ ಶೇಖ್ ಎಂದು ಹಿಂದಿಯಲ್ಲಿ ಹೆಸರು ಬರೆದು ಅದರ ಕೆಳಗಿರುವ ಸಹಿ ನಿಮ್ಮದೇ? ಎಂದು ಕೇಳಿದಾಗ ಸಾಕ್ಷಿ ಅದನ್ನು ನೋಡಿ ಒಪ್ಪಿದ್ದು ಸಾಕ್ಷಿ ಒಪ್ಪಿದ ಸಹಿಯನ್ನು ನಿಪಿ-3ಸಿ ಎಂದು ಗುರುತಿಸಲಾಯಿತು. ನಿಪಿ-3ಸಿ ಗುರುತಿಸಿದ ನಂತರ ಸಾಕ್ಷಿಯು ಸದರಿ ಸಹಿಯು ನನ್ನದಲ್ಲ ಎಂದು ನುಡಿಯುತ್ತಾರೆ. ನಿಪಿ-3ರನ್ನು ಅಮಿನಾ ಬಿ. ಬರೆದಾಗ ಅಲ್ಲಿ ಅಂಬಾರಾಯ, ನಾಮ್ ದೇವ್, ಮೆಹಬೂಬ್ ಸಾಬ್ ಮತ್ತು ಮಕ್ ಬುಲ್ ಶೇಖ್ ಅಲ್ಲಿದ್ದರು ಎಂದರೆ ನನಗೆ ಗೊತ್ತಿಲ್ಲ. ನಿಮ್ಮ ತಮ್ಮ ಮಕ್ ಬುಲ್ ಶೇಖ್ ಈಗ ತೀರಿಕೊಂಡಿದ್ದಾರೆ ಎಂದರೆ ಸರಿ. ನಿಪಿ- 3 ದಾಖಲೆಯನ್ನು ರಾಣೋಜಿ ಬರೆದಿದ್ದಾನೆ ಎಂದರೆ ನನಗೆ ಗೊತ್ತಿಲ್ಲ. ಸಾಕ್ಷಿಗೆ ಈಗ ಕೆ.ಜೆ.ಕೆ. ವಕೀಲರು ಪ್ರತಿವಾದಿ ನಂಬರ್ 1ಎ ರವರು ಸಲ್ಲಿಸಿದ ವಕಾಲತ್ ನಾಮೆಯನ್ನು ತೋರಿಸಿ ಅದರಲ್ಲಿ ನಿಮ್ಮ ಸಹಿ ಇದೆಯಾ ಎಂದು ಕೇಳಿದಾಗ ಸಾಕ್ಷಿ ತನ್ನ ಸಹಿ ಇಲ್ಲ ಎಂದು ನುಡಿದಿರುತ್ತಾರೆ. ನಿಮ್ಮ ಮುಖ್ಯ ವಿಚಾರಣೆಯ 4ನೇ ಖಂಡಿಕೆಯಲ್ಲಿ ಅಮೀನಾ ಬಿ. ಇವರು ಅವರ ಸೊಸೆಯಂದಿರಿಗೆ 2021ರ ರಂಜಾನ್ ತಿಂಗಳಿನಲ್ಲಿ Gift Deed ಬರೆದುಕೊಟ್ಟಿದ್ದಾರೆಂದು ನಮೂದು ಮಾಡಿದ್ದೀರಿ ಇದು ಸುಳ್ಳು ಎಂದರೆ ಸರಿಯಲ್ಲ. ನಿಡಿ-1 ಛಾಪಾ ಕಾಗದವನ್ನು ನನ್ನ ತಾಯಿ ಅಮೀನಾ ಬಿ. ತಂದು ಸದರಿ ದಾಖಲೆಯನ್ನು ಮಾಡಿಕೊಟ್ಟಿದ್ದಾರೆಂದು ನುಡಿಯುತ್ತಾರೆ. ನಿಡಿ-1 ದಾಖಲೆಯ ಮೇಲೆ ಅಮೀನಾ ಬಿ. ಅವರ ಹೆಬ್ಬೆಟ್ಟಿನ ಗುರುತು ಇಲ್ಲ ಎಂದರೆ ಸರಿಯಲ್ಲ. ಅಮೀನಾ ಬಿ.ಯವರು ಅವರ ಸೊಸೆಯಂದಿರಿಗೆ ಯಾವುದೇ ದಾನ ಪತ್ರವನ್ನು ಬರೆದುಕೊಟ್ಟಿಲ್ಲ ಎಂಬ ಪ್ರಶ್ನೆಗೆ ಸಾಕ್ಷಿ ಬರೆದುಕೊಟ್ಟಿದ್ದಾರೆ ಎಂದು ನುಡಿಯುತ್ತಾರೆ. ನಿಮ್ಮ ಹೆಂಡತಿ ಮತ್ತು ಅವರ ನೆಗಣಿಯವರ ಹೆಸರುಗಳು ದಾವಾ ಆಸ್ತಿಯ ಪಹಣಿ ಪತ್ರಿಕೆಯಲ್ಲಿ ತಪ್ಪಾಗಿ ನಮೂದಾಗಿವೆ ಎಂದರೆ ಸರಿಯಲ್ಲ. ದಿಃ 08.04.2000 ಇಸವಿಯಿಂದ 2014ರವರೆಗೆ ವಾದಿಯೇ ದಾವಾ ಆಸ್ತಿಯನ್ನು ಉಳುತ್ತಿದ್ದ ಎಂದರೆ ಸರಿಯಲ್ಲ. ಅಮೀನಾ ಬಿ.ಯವರು ವಾದಿಗೆ ಖರೀದಿ ಕರಾರು ಪತ್ರವನ್ನು ಮಾಡಿಕೊಟ್ಟು ಕಬ್ಜೆಯನ್ನು ಸಹ ಕೊಟ್ಟಿದ್ದು ಕೇಳಿದಾಗ ಸದರಿ ಖರೀದಿ ಕರಾರಿನ ಪ್ರಕಾರ ನೋಂದಾಯಿತ ಖರೀದಿ ಪತ್ರವನ್ನು ಮಾಡಿಕೊಡುತ್ತೇನೆ ಎಂದು ಹೇಳಿದ್ದಳು ಎಂದರೆ ಸರಿಯಲ್ಲ. ಅಮೀನಾ ಬಿ. ದಾವಾ ಆಸ್ತಿ ತನ್ನ ಹೆಸರಿನಲ್ಲಿದ್ದಾಗ ವಾದಿಯ ಕಬ್ಜೆಗೆ ತೊಂದರೆ ನೀಡಿಲ್ಲ ಎಂದರೆ ಸರಿಯಲ್ಲ. ನಿಮ್ಮ ಹೆಂಡತಿ ಮತ್ತು ಅವರ ನೆಗಣಿಯವರ ಹೆಸರಿಗೆ ದಾವಾ ಆಸ್ತಿಯ ಪಹಣಿ

ಪತ್ರಿಕೆ ಆದ ನಂತರ ಅಮೀನಾ ಬಿ. ದಾವೆಯನ್ನು ಸಲ್ಲಿಸಿ ವಾದಿಯ ಕಬ್ಜೆಗೆ ತೊಂದರೆ ಕೊಟ್ಟಿದ್ದಾರೆ ಎಂದರೆ ಸರಿಯಲ್ಲ.

ಈ ಹಂತದಲ್ಲಿ ವಾದಿ ಪರ ವಕೀಲರು ಮುಂದುವರಿದ ಪಾಟೀ ಸವಾಲಿಗೆ ಸಮಯ ಕೋರಿದ್ದು, ಸಮಯ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಲಾಯಿತು.)

ಓ. ಹೇ . ಕೇ. ಸರಿ ಇದೆ.

ಸಿವಿಲ್ ನ್ಯಾಯಾಧೀಶರು,
ಚಿತ್ತಾಪೂರ.